1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರಃ

ಚಾಸಾ-5 ಪ್ರಾಸಾಃ3

ದಿನಾಂಕಃ 16.03.2026

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಮಧುಕರ |
| ತಂದೆಯ ಹೆಸರು | : | ಸಂಜೀವ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಗುತ್ತಿಗೆದಾರ |
| ವಾಸ ಸ್ಥಳ | : | ಕಾಳವಾರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಭಾ. ದಂ. ಪ್ರ, ಸಂ, ಕಲಂ 299 ಸಿ ಆರ್ ಪಿ ಸಿ ರಡಿಯಲ್ಲಿ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ**

ನಾನು ಗಾರೆ ಕೆಲಸ ಮಾಡುತ್ತಿದ್ದು ದಿಃ 05-01-2013 ರಂದು ಕೊಟೇಶ್ವರ ಬೈ ಪಾಸು ಬಳಿ ಗಣೇಶರವರೊಂದಿಗೆ ನಿಂತಿದ್ದಾಗ ನಮ್ಮ ಎದುರುಗಡೆ ಪ್ರವೀಣ ಶೆಟ್ಟಿ ಎಂಬುವರು ಬೈಕಿನಲ್ಲಿ ಹೋಗುತ್ತಿದ್ದು ರಾತ್ರಿ 8-10ರ ಸಮಯದಲ್ಲಿ ಕಟ್ಕೇರಿ ಶಾಲೆಯ ಹತ್ತಿರ ರಸ್ತೆಯಲ್ಲಿ ಮಹಾಲಿಂಗೇಶ್ವರ ದೇವಸ್ಥಾನದ ಬಳಿ ಒಬ್ಬ ಟೆಂಪೋ ಚಾಲಕ ವೇಗವಾಗಿ ಚಲಾಯಿಸಿಕೊಂಡು ಬಂದು ಮೋಟಾರು ಸೈಕಲಿನ ಮುಂಭಾಗಕ್ಕೆ ರಸ್ತೆಯ ತೀರ ಬಲಭಾಗಕ್ಕೆ ಚಲಾಯಿಸಿ ಡಿಕ್ಕಿಪಡಿಸಿರುತ್ತಾರೆ. ಅದರಲ್ಲಿದ್ದ ವ್ಯಕ್ತಿ ನನ್ನ ಪರಿಚಯಸ್ಥನಾದ ಉಮೇಶ ಆಗಿದ್ದು ಮತ್ತೊಬ್ಬ ಸವಾರ ರಾಘವೇಂದ್ರನಾಗಿದ್ದು, ಉಮೇಶರವರು ತೀವ್ರವಾಗಿ ಗಾಯಗೊಂಡು ಸ್ಥಳದಲ್ಲಿ ಮೃತಪಟ್ಟಿದ್ದು ರಾಘವೇಂದ್ರರವರು ಎನ್ ಆರ್ ಆಚಾರ್ಯ ಆಸ್ಪತ್ರೆಗೆ ಸ್ಥಳಾಂತರಿಸಿರುತ್ತಾರೆ. ಸದ್ರಿ ಟೆಂಪೋ ನಂಬರ್ ಕೆಎ-20-ಸಿ-4779 ಆಗಿದ್ದು ಅದರ ಚಾಲಕನ ಹೆಸರು ಹುಸೇನ್ ಖಾನ್ ಎಂಬುವುದಾಗಿ ತಿಳಿದು ಬಂದಿರುತ್ತದೆ. ಆತನ ಅತೀ ವೇಗ ಹಾಗೂ ನಿರ್ಲಕ್ಷ್ಯತನದ ಚಾಲನೆಯಿಂದ ಸದ್ರಿ ಅಪಘಾತ ಸಂಭವಿಸಿರುತ್ತದೆ. ಈ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**ಆರೋಪಿ ತಲೆಮರೆಸಿಕೊಂಡಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು**

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**